ಈ ಸುದ್ದಿಯನ್ನು ಕೇಳಿ ಆ ರಾಜ್ಯದ ಅನೇಕ ಜನರು ಸಂತೋಷದಿಂದ ಸ್ಪರ್ಧೆಯಲ್ಲಿ ಭಾಗವಹಿಸಿದರು. ಭಾಗವಹಿಸಿದ ಎಲ್ಲರಲ್ಲಿಯೂ 'ನಾನೇ ಈ ರಾಜ್ಯದ ಮುಂದಿನ ಮುಖ್ಯಮಂತ್ರಿ' ಎನ್ನುವ ಭಾವನೆ ಮೂಡಿತ್ತು. ಸಂಜೆಯಾಗುವ ಹೊತ್ತಿಗೆ ರಾಜಭವನದ ಮುಖ್ಯದ್ವಾರದ ಮುಂಭಾಗದಲ್ಲಿ ಜನಜಂಗುಳಿ ಏರ್ಪಟ್ಟಿತ್ತು.

ಸಂಜೆ ರಾಜಭವನದ ಪ್ರವೇಶದ್ವಾರವನ್ನು ತೆರೆದು, ಸ್ಪರ್ಧೆಗೆ ಆಗಮಿಸಿದವರಲ್ಲಿ ಒಬ್ಬೊಬ್ಬರನ್ನು ಒಳಕ್ಕೆ ಬಿಡಲಾಯಿತು. ಎಲ್ಲರೂ ಅಲ್ಲಿರುವ ನಿರ್ದಿಷ್ಟ ಸ್ಥಳದಲ್ಲಿ ಕುಳಿತುಕೊಂಡರು. ಅನಂತರ ರಾಜಗುರುಗಳು ತಾವು ನಡೆಸಲಿರುವ ಸ್ಪರ್ಧೆಯ ನಿಯಮಗಳನ್ನು ವಿವರಿಸಿದರು. ರಾಜಗುರುಗಳು ಅಲ್ಲಿ ಮೂರು ಕೋಣೆಗಳನ್ನು ವಿಶೇಷ ರೀತಿಯಲ್ಲಿ ವ್ಯವಸ್ಥೆ ಮಾಡಿದ್ದರು; ಅದಾದ ಬಳಿಕ ಒಂದು ದೊಡ್ಡ ಕೋಣೆಯಿತ್ತು. ಅಲ್ಲಿ ಮುಖ್ಯಮಂತ್ರಿ ಸ್ಪರ್ಧಿಯು ರಾಜನ ಎದುರು ನೃತ್ಯ ಮಾಡಬೇಕಿತ್ತು.

ರಾಜನ ಆದೇಶದ ಅನಂತರ ಸ್ಪರ್ಧೆ ಆರಂಭವಾಯಿತು. ರಾಜಗುರುಗಳು ಸ್ಪರ್ಧಿಗಳನ್ನು ಒಬ್ಬೊಬ್ಬರನ್ನಾಗಿ ಕಳುಹಿಸತೊಡಗಿದರು. ಮೊದಲನೇ ಸ್ಪರ್ಧಿಯು ಮೊದಲನೇ ಕೋಣೆಯನ್ನು ಪ್ರವೇಶಿಸುತ್ತಿದ್ದಂತೆಯೇ ಆಶ್ಚರ್ಯಚಕಿತನಾದ. ಆ ಕೋಣೆಯಲ್ಲಿ ಬೆಳ್ಳಿಯ ನಾಣ್ಯಗಳು ತುಂಬಿದ್ದವು. ಆತ ಕೆಲವನ್ನು ತನ್ನ ಕಿಸೆಯೊಳಗೆ ತುಂಬಿಕೊಂಡ. ಎರಡನೇ ಕೋಣೆಯು ಚಿನ್ನದ ನಾಣ್ಯಗಳಿಂದ ತುಂಬಿಹೋಗಿತ್ತು. ಆತನಲ್ಲಿ ಆಸೆ ಇಮ್ಮಡಿಗೊಂಡಿತು. ಒಂದಿಷ್ಟು ಚಿನ್ನದ ನಾಣ್ಯಗಳನ್ನೂ ಕಿಸೆಯೊಳಗೆ ತುಂಬಿಕೊಂಡು ಮುಂದಿನ ಕೋಣೆಯನ್ನು ಪ್ರವೇಶಿಸಿದ. ಆ ಕೋಣೆ ರತ್ನಗಳಿಂದ ತುಂಬಿಹೋಗಿತ್ತು. ಆತ ಒಂದಿಷ್ಟು ರತ್ನಗಳನ್ನೂ ಕಿಸೆಗೆ ಹಾಕಿಕೊಂಡು ನಾಲ್ಕನೆಯ ಕೋಣೆ ಪ್ರವೇಶಿಸಿದ. ಆ ಕೋಣೆಯಲ್ಲಿಯೇ ಆತ ನೃತ್ಯ ಮಾಡಬೇಕಿತ್ತು.

ಇದೇ ರೀತಿಯಲ್ಲಿ ಅಲ್ಲಿಗೆ ಆಗಮಿಸಿದ್ದ ಪ್ರತಿಯೊಬ್ಬ ಸ್ಪರ್ಧಿಯನ್ನೂ ಸರದಿಯಲ್ಲಿ ಒಳಕ್ಕೆ ಕಳುಹಿಸಲಾಯಿತು. ಎಲ್ಲರೂ ಆ ಮೂರು ಕೋಣೆಗಳನ್ನು ಹಾದುಹೋಗುವಾಗ ತಮ್ಮ ಕಿಸೆ ಭರ್ತಿಯಾಗುವಷ್ಟು ಬೆಳ್ಳಿ, ಚಿನ್ನ ಹಾಗೂ ರತ್ನವನ್ನು ತುಂಬಿಕೊಂಡಿದ್ದರು. ಒಂದು ವೇಳೆ ತಾವು ಈ ಸ್ಪರ್ಧೆಯಲ್ಲಿ ವಿಫಲರಾದರೂ ಈ ಎಲ್ಲಾ ನಾಣ್ಯಗಳನ್ನು ಮಾರಾಟ ಮಾಡಿ ಮುಂದಿನ ದಿನಗಳನ್ನು ನೆಮ್ಮದಿಯಿಂದ ಕಳೆಯಬಹುದು ಎನ್ನುವುದು ಅವರೆಲ್ಲರ ಲೆಕ್ಕಾಚಾರವಾಗಿತ್ತು. ಆದರೆ ಒಬ್ಬ ವ್ಯಕ್ತಿ ಮಾತ್ರ ಆ ರೀತಿ ಮಾಡಲಿಲ್ಲ. ಆತನ ಹೆಸರು ಗೋಪಾಲ. ಆತ ಯಾವ ಕೋಣೆಯಿಂದಲೂ ನಾಣ್ಯಗಳನ್ನಾಗಲಿ, ರತ್ನಗಳನ್ನಾಗಲಿ ತೆಗೆದುಕೊಳ್ಳಲಿಲ್ಲ.

ಎಲ್ಲರೂ ರಾಜನಿರುವ ಕೋಣೆಯನ್ನು ತಲುಪಿದ ಮೇಲೆ ನೃತ್ಯ ಮಾಡುವಂತೆ ರಾಜನು ಎಲ್ಲರಿಗೂ ಆದೇಶ ನೀಡಿದ. ಎಲ್ಲರೂ ಆತನ ಆದೇಶವನ್ನು ಪಾಲಿಸಿದರು. ನೃತ್ಯವನ್ನು ಆರಂಭಿಸುತ್ತಿದ್ದಂತೆಯೇ ಅವರ ಕಿಸೆಗಳಿಂದ ಬೆಳ್ಳಿ, ಚಿನ್ನದ ನಾಣ್ಯಗಳು ಹಾಗೂ ರತ್ನಗಳು ಉದುರತೊಡಗಿದವು. ರಾಜನು ತಕ್ಷಣವೇ ತನ್ನ ಸಿಪಾಯಿಗಳನ್ನು ಕರೆದು, ಯಾರ ಕಿಸೆಯಿಂದ ಬೆಳ್ಳಿ, ಚಿನ್ನದ ನಾಣ್ಯಗಳು ಮತ್ತು ರತ್ನಗಳು ಉದುರುತ್ತಿವೆಯೋ ಅವರೆಲ್ಲರನ್ನೂ ರಾಜಭವನದಿಂದ ಹೊರಕ್ಕೆ ಹಾಕುವಂತೆ ಆದೇಶಿಸಿದ. ಗೋಪಾಲನನ್ನು ಹೊರತುಪಡಿಸಿ ಎಲ್ಲಾ ಸ್ಪರ್ಧಿಗಳನ್ನು ಹೊರಕ್ಕೆ ಅಟ್ಟಲಾಯಿತು. ರಾಜನಿಗೆ ಗೋಪಾಲನ ಪ್ರಾಮಾಣಿಕತೆಯನ್ನು ಕಂಡು ಸಂತೋಷವಾಯಿತು.

ಪ್ರಾಮಾಣಿಕತೆಯು ಒಂದು ವಿಶಿಷ್ಟವಾದ ಆಭರಣವಾಗಿದ್ದು, ಅದನ್ನು ಧರಿಸಿದವರು 'ಅಮೂಲ್ಯ' ವ್ಯಕ್ತಿಗಳಾಗಿರುತ್ತಾರೆ. ಈ ಉದ್ದೇಶದಿಂದಲೇ ರಾಜಗುರು ಪ್ರಾಮಾಣಿಕ ವ್ಯಕ್ತಿಯನ್ನು ಹುಡುಕಲು ಈ ಸ್ಪರ್ಧೆಯನ್ನು ನಡೆಸಿದ್ದರು. ಚಿನ್ನ, ಬೆಳ್ಳಿ, ರತ್ನಗಳಿಗೆ ಮರುಳಾಗದ ಗೋಪಾಲ ವಿಜೇತನಾದ, ರಾಜನ ಮೆಚ್ಚುಗೆಗೂ ಪಾತ್ರನಾದ. ಅವನೇ ಆ ರಾಜ್ಯದ ಮುಖ್ಯಮಂತ್ರಿ ಎಂದು ಘೋಷಿಸಲಾಯಿತು.